<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ</u>
**<u>ನ್ಯಾಯಾಲಯ, ಪಿರಿಯಾಪಟ್ಟಣ.</u>**

**<u>ಸಿ.ಸಿ.2396/2021</u>**

ಪಿರ್ಯಾದುದಾರರು : ಚಂದ್ರಶೇಖರ್ ಬಿನ್ ಲೇಟ್ ಜವರಪ್ಪ

ವಿರುದ್ಧ

ಆರೋಪಿ : ಶ್ರೀ ಶಿವಸ್ವಾಮಿ ಎಂ.ಬಿ ಬಿನ್ ಬಸವರಾಜು,
ವಯಸ್ಸು ಸುಮಾರು 39 ವರ್ಷ.
ವಾಸಃ 1 ನೇ ಬ್ಲಾಕ್, ಕೊಪ್ಪ ಗ್ರಾಮ,
ಪಿರಿಯಾಪಟ್ಟಣ ತಾಲೂಕು

<u>ಆರೋಪಣೆ</u>

ಶ್ರೀ ಯೋಗೇಶ.ಎಂ.ಆರ್, ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಅಪಾದನೆಯನ್ನು ಹೊರಿಸುತ್ತಿದ್ದೇನೆ. ಆರೋಪಿಯಾದ ನೀವು ಫಿರ್ಯಾದಿಗೆ ನೀಡಬೇಕಾಗಿದ್ದ ಹಣದ ಮರುಪಾವತಿಗಾಗಿ ವಿಜಯಾ ಬ್ಯಾಂಕ್‌ನಲ್ಲಿ ನಿಮ್ಮ ಖಾತೆಯ ಚೆಕ್ ಸಂಖ್ಯೆಯಾದ 487440 ರೂ.6,00,000/- ಹಣಕ್ಕೆ ದಿನಾಂಕಃ 26.02.2021 ರಂದು ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ತಿಳಿಸಿದ್ದು, ಸದರಿ ಚೆಕ್ಕನ್ನು ಫಿರ್ಯಾದಿಯು ಪಿರಿಯಾಪಟ್ಟಣ ಶಾಖೆಯ ಕೆನರಾ ಬ್ಯಾಂಕ್‌ನಲ್ಲಿ ನಗದೀಕರಣಕ್ಕೆ ಸಲ್ಲಿಸಿದ್ದು, ಸದರಿ ಚೆಕ್ ನಿಮ್ಮ ಖಾತೆಯು **"Funds insufficient"** ಎನ್ನುವ ಹಿಂಬರಹದೊಂದಿಗೆ ಅಮಾನ್ಯವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಫಿರ್ಯಾದಿಯು ನೋಂದಾಯಿತ ಅಂಚೆ ಮುಖಾಂತರ ನಿಮಗೆ ನೋಟೀಸು ನೀಡಿದ್ದು, ಸದರಿ ನೊಟೀಸು ವಾಪಸಾಗಿದ್ದು, ನೀವು ಫಿರ್ಯಾದಿಗೆ ನೀಡಬೇಕಾಗಿದ್ದ ಹಣವನ್ನು ನಿಗದಿತ ಅವಧಿಯೊಳಗೆ ಮರುಪಾವತಿ ಮಾಡದೇ ಇರುವುದರಿಂದ, ಆರೋಪಿತರಾದ ನೀವು ನನ್ನ ಸಂಜ್ಞೆಯೊಳಗೆ ವರ್ಗಾವಣೀಯ ಸ್ವತ್ತುಗಳ ಅಧಿನಿಯಮ ಕಲಂ.138 ರ ಅಡಿಯಲ್ಲಿ ಅಪರಾಧ ಮಾಡಿದ್ದೀರಿ ಎಂದು ಆರೋಪಿಸಲಾಗಿದೆ.

ಪ್ರಶ್ನೆ 1 : ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ?
ಉ : ತಿಳಿಯಿತು.

ಪ್ರಶ್ನೆ : ಈಗ ಓದಿ ಹೇಳಿದ ಆರೋಪಣೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ಬಯಸುವಿರೋ?

ಉ :

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ*: 22.02.2023.*

*(ಯೋಗೇಶ.ಎಂ.ಆರ್.)*
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿ, ಪಿರಿಯಾಪಟ್ಟಣ

ಆರೋಪಿಯ ಸಹಿ